**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

<u>ಸಿ.ಸಿ. ನಂಬರ 1906 /2023</u> ಸಿ.ಡಬ್ಲೂ.**5** ಪಿ.ಡಬ್ಲೂ.**2**

| | |
|---|---|
| ಹೆಸರು | ಲಕ್ಷ್ಮಿಪುತ್ರ |
| ತಂದೆ/ಗಂಡ | ಭೈರಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕವಲಗ ಗ್ರಾಮ |

ದಿನಾಂಕ 06-03-2026
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ಚಾಸಾ 1, ರಿಂದ 4, 6 ರಿಂದ 9 ರವರ ಪರಿಚಯ ಇರುತ್ತದೆ. ದಿಃ 16.02.2023 ರಂದು ಟ್ರಾಕ್ಟರ್ ಪಲ್ಟಿ ಆಗಿತ್ತು. ಸಮಾರು 04.30 ರಿಂದ 05.30 ಒಳಗೆ ಹಣಮಂತರಾಯ ಅವರ ಮನೆಯವರು ವಿಷಯ ತಿಳಿಸಿ ನನ್ನನ್ನು ಮತ್ತು ಚಾಸ-4ರವರನ್ನು ಕರೆದುಕೊಂಡು ಹೋಗಿರುತ್ತಾರೆ. ನಮ್ಮ ಸಮಕ್ಷಮ ಪಿ ಎಸ್ ಐ ಅವರು ಪಂಚನಾಮೆ ಮಾಡಿ ಸ್ಥಳದಲ್ಲೆ ಇದ್ದ ಟ್ರಾಕ್ಟರ್ ಜಪ್ತಿಪಡಿಸಿಕೊಂಡಿರುತ್ತಾರೆ. ಪೋಲಿಸರು ನಮಗೆ ಕಲ್ಯಾಣರಾವ್ ಜಕ್ಕಾಣೆ ಅವರ ಹೊಲದ ಹತ್ತಿರ ಕರೆದಿದ್ದರು. ಸಾಕ್ಷಿಯು ಗುನ್ನ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಸಾಕ್ಷಿಯ ಸಹಿಯನ್ನು ನಿಪಿ. 4 (ಎ) ಅಂತಾ ಗುರುತಿಸಲಾಯಿತು. ಜಾನ್ ಡಿಯರ ಕಂಪನಿಯ ಟ್ರಾಕ್ಟರ್ ನ್ನು ಪೋಲಿಸರು ವಶಕ್ಕೆ ಪಡೆದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಡಿ ಎಸ್ ಎಮ್ ವಕೀಲರಿಂದ:</u>

ಪೋಲಿಸರು ನನಗೆ ಕರೆದಾಗ ನಾನು ನಮ್ಮ ಕವಲಗ ಗ್ರಾಮದ ಬಾಬಸಾಹೇಬ ಮಹಾದೇವ ಮಂದಿರದ ಮುಂದೆ ಇರುವ ಹೊಟೇಲ್ ನಲ್ಲಿ ನಾನು ಮತ್ತು ಶಂಕರಣ್ಣ ಇದ್ದೇವು. ಆ ಸಮಯದಲ್ಲಿ ನಮಗೆ ವಿಷಯ ತಿಳಿಸಿದಾಗ ನಾವು ಪಂಚಾಯಿತಿ ಸದಸ್ಯರಾದ ಪ್ರಕಾಶರವರನ್ನು ಕರೆದುಕೊಂಡು ಹೋಗಿರುತ್ತೇವೆ. ಪಂಚನಾಮೆಯನ್ನು ಬರೆಯಲು ನಾವು ಮಾಹಿತಿ ಕೊಟ್ಟಿರುವುದಿಲ್ಲ. ಪಂಚನಾಮೆಯನ್ನು ಬರೆದ ನಂತರ ಪೋಲಿಸರು ನಮಗೆ ಸಹಿ ಮಾಡು ಎಂದು ಹೇಳಿದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪಂಚನಾವೆಯಲ್ಲಿ ಏನು ನಮೂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ, ಸಹಿ ಮಾಡಲು ಹೇಳಿದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗದಿದ್ದರು ಸಹಿತ ಚಾಸ-1ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ